ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಬಂದಿದೆ.

ಆ) ಈಗಾಗಲೇ ಸದರಿ ಕಾಮಗಾರಿಯ ರೂ. 78.69 ಲಕ್ಷ ಅಂದಾಜು ಪಟ್ಟಿಗೆ ಜುಲೈ 89ರಲ್ಲಿ ಆಡಳಿತಾತ್ಮಕ ಅನುಮೋದನೆ ಮತ್ತು ತಾಂತ್ರಿಕ ಮಂಜೂರಾತಿ ದೊರೆತಿರುತ್ತದೆ. ಈ ಸ್ಥಳದಲ್ಲಿ ಕೆರೆ ನಿರ್ಮಿಸಲು ಭೂ ಮಾಲೀಕರಿಂದ ತೀವ್ರ ವಿರೋಧ ಬಂದ ಕಾರಣ ಕೆರೆಯ ನಿವೇಶನವನ್ನು ಬದಲಾಯಿಸಿ ಮಾರ್ಪಡಿಸಿದ ಅಂದಾಜುಪಟ್ಟಿ ರೂ. 129 ಲಕ್ಷಗಳಿಗೆ ತಯಾರಾಗಿದ್ದು, ಇದಕ್ಕೆ ಮಂಜೂರಾತಿ ನೀಡುವ ಪ್ರಶ್ನೆ ಸರ್ಕಾರದ ಪರಿಶೀಲನೆಯಲ್ಲಿದೆ.

ಇ) 1992–93ನೇ ಸಾಲಿಗೆ ರೂ. 40 ಲಕ್ಷಗಳ ಅನುದಾನವನ್ನು ನೀಡಲಾಗಿದೆ. ಮಾರ್ಪಡಿಸಿದ ಅಂದಾಜುಪಟ್ಟಿಗೆ ಆಡಳಿತಾತ್ಮಕ ಮತ್ತು ತಾಂತ್ರಿಕ ಅನುಮೋದನೆ ದೊರೆತ ಮೇಲೆ ಹಣ ಖರ್ಚು ಮಾಡುವ ಬಗ್ಗೆ ಕ್ರಮ ಕೈಗೊಳ್ಳಲಾಗುವುದು.

ಈ) ಮೇಲಿನ ಉತ್ತರಗಳಿಂದ ಈ ಪ್ರಶ್ನೆ ಉದ್ಭವಿಸುವುದಿಲ್ಲ.

ಧಾರವಾಡದಲ್ಲಿ ಹೈಕೋರ್ಟ್ ಪೀಠದ ಸ್ಥಾಪನೆ

94 (433) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಹೈಕೋರ್ಟ್ ಪೀಠವನ್ನು ಬೆಂಗಳೂರು ಬಿಟ್ಟು ಬೇರೆ ಕಡೆಗೆ ಅಂದರೆ ಉತ್ತರ ಕರ್ನಾಟಕದ ಧಾರವಾಡದಲ್ಲಿ ಸ್ಥಾಪಿಸಲು ಹೈಕೋರ್ಟ್‌ದವರು ಒಪ್ಪಿಗೆ ನೀಡಿರುವರೇ;

ಆ) ಹಾಗಿದ್ದಲ್ಲಿ ಹೈಕೋರ್ಟ್ ಪೀಠವನ್ನು ಉತ್ತರ ಕರ್ನಾಟಕದ ಧಾರವಾಡದಲ್ಲಿ ಸ್ಥಾಪಿಸಲು ಕೇಂದ್ರ ಸರ್ಕಾರದವರು ಒಪ್ಪಿಗೆ ನೀಡಿರುವರೆ;

ಇ) ಧಾರವಾಡದಲ್ಲಿ ಹೈಕೋರ್ಟ್ ಪೀಠವನ್ನು ಸ್ಥಾಪಿಸುವ ನಿರ್ಣಯವನ್ನು ತೆಗೆದುಕೊಂಡಿದ್ದಲ್ಲಿ ಹೈಕೋರ್ಟ್ ಪೀಠ ಸ್ಥಾಪಿಸುವ ಕಾರ್ಯವು ಯಾವ ಹಂತದಲ್ಲಿದೆ;

ಈ) ಇನ್ನೂ ಎಷ್ಟು ಕಾಲಾವಕಾಶದಲ್ಲಿ ಹೈಕೋರ್ಟ್ ಪೀಠವನ್ನು ಧಾರವಾಡದಲ್ಲಿ ಸ್ಥಾಪಿಸಲಾಗುವುದು; ಮತ್ತು ಅದು ಈಗ ಯಾವ ಹಂತದಲ್ಲಿ ಇರುವುದು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

ಅ) ಸದರಿ ಪ್ರಸ್ತಾವನೆಯನ್ನು ಉಚ್ಚ ನ್ಯಾಯಾಲಯದ ಪೂರ್ಣ ಪೀಠದ ಮುಂದೆ ಇಟ್ಟು ತೀರ್ಮಾನವನ್ನು ಸರ್ಕಾರಕ್ಕೆ ತಿಳಿಸಲಾಗುವುದೆಂದು ಉಚ್ಚ ನ್ಯಾಯಾಲಯ ತಿಳಿಸಿದೆ. ತೀರ್ಮಾನವನ್ನು ಎದುರು ನೋಡಲಾಗಿದೆ.

ಆ) ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರ ಪುನರ್‌ಪರಿಶೀಲಿಸಿದ ಅಭಿಪ್ರಾಯವನ್ನು ಪಡೆದು ನಂತರ ನಿರ್ದಿಷ್ಟ ಪ್ರಸ್ತಾವನೆಯನ್ನು ಪರಿಗಣನೆಗಾಗಿ ಕಳುಹಿಸಿಕೊಡಬೇಕೆಂದು ಕೇಂದ್ರ ಸರ್ಕಾರ ತಿಳಿಸಿದೆ.

ಇ) ಕೇಂದ್ರ ಸರ್ಕಾರವು ಸಲಹೆ ಮಾಡಿರುವಂತೆ ಸದರಿ ಪ್ರಸ್ತಾವನೆಗೆ ಉಚ್ಚ ನ್ಯಾಯಾಲಯದ ಸಹಮತಿಯನ್ನು ಕೋರಲಾಗಿದ್ದು ಅದು ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿದೆ.

ಈ) ಪ್ರಸ್ತಾವನೆಯು ಉಚ್ಚ ನ್ಯಾಯಾಲಯದ ಪರಿಶೀಲನೆಯಲ್ಲಿರುವುದರಿಂದ ಇಂತಿಷ್ಟೇ ಸಮಯದಲ್ಲಿ ಪೀಠವನ್ನು ಸ್ಥಾಪಿಸಲಾಗುವುದು ಎಂದು ಹೇಳಲು ಸಾಧ್ಯವಿಲ್ಲ.

ರಾಜ್ಯದಲ್ಲಿ ತೋಟಗಾರಿಕೆ ಅಭಿವೃದ್ಧಿ ಪ್ರಾಧಿಕಾರ

95 (414) ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ರಾಜ್ಯದಲ್ಲಿ ತೋಟಗಾರಿಕಾ ಅಭಿವೃದ್ಧಿ ಪ್ರಾಧಿಕಾರವನ್ನು ತೋಟಗಾರಿಕೆಯ ಸಮಗ್ರ ಅಭಿವೃದ್ಧಿಗಾರಿ ರಚಿಸುವ ಪ್ರಸ್ತಾವನೆ ಇದೆಯೆ;

2) ಹಾಗಿಲ್ಲದಿದ್ದಲ್ಲಿ ಕೇಂದ್ರ ಸರ್ಕಾರ ಮತ್ತು ವಿಶ್ವ ಬ್ಯಾಂಕ್ ನೆರವಿನಿಂದ ವಿವಿಧ ತೋಟಗಾರಿಕೆ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವಲ್ಲಿ ಸರ್ಕಾರ, ಪ್ರಾಧಿಕಾರ ರಚಿಸುವ ಬಗ್ಗೆ ಕೈಗೊಂಡ ಕ್ರಮಗಳೇನು ?

ಶ್ರೀ ಎಂ. ವೀರಪ್ಪಮೊಯಿಲಿ (ಮುಖ್ಯಮಂತ್ರಿಗಳು)

1) ಇರುವುದಿಲ್ಲ.

2) ರಾಜ್ಯದಲ್ಲಿ ಈ ತರಹದ ಪ್ರಾಧಿಕಾರವನ್ನು ರಚಿಸುವ ಉದ್ದೇಶ ಇರುವುದಿಲ್ಲ. ಆದಾಗ್ಯೂ ತೋಟಗಾರಿಕಾ ಇಲಾಖೆ ಕರ್ನಾಟಕದಲ್ಲಿ ಸಮಗ್ರ ತೋಟಗಾರಿಕೆ ಅಭಿವೃದ್ಧಿಗಾಗಿ ಕೇಂದ್ರ ಸರ್ಕಾರ ವಿಶ್ವಬ್ಯಾಂಕ್ ಮತ್ತು ಐರೋಪ್ಯ ಆರ್ಥಿಕ ಸಮುದಾಯದ ಸಹಯೋಗದಿಂದ ಈ ಕೆಳಕಂಡ ಯೋಜನೆಗಳನ್ನು ರೂಪಿಸಿದ್ದು ಸದರಿ ಯೋಜನೆಗಳು ಸರ್ಕಾರದ ಪರಿಶೀಲನೆಯಲ್ಲಿವೆ.

ವಿವರಗಳು

ಅ) ಐರೋಪ್ಯ ಆರ್ಥಿಕ ಸಮುದಾಯದ ಸಹಯೋಗದೊಂದಿಗೆ ಕರ್ನಾಟಕ ತೋಟಗಾರಿಕೆ ಅಭಿವೃದ್ಧಿ ಯೋಜನೆ.
ಆ) ಐರೋಪ್ಯ ಆರ್ಥಿಕ ಸಮುದಾಯದ ಸಹಯೋಗದೊಂದಿಗೆ ತೆಂಗು ಅಭಿವೃದ್ಧಿ ಯೋಜನೆ.
ಇ) ಕರ್ನಾಟಕ ಒಣ ಬೇಸಾಯ ತೋಟಗಾರಿಕೆ ಅಭಿವೃದ್ಧಿ ಯೋಜನೆ.

ದೆಹಲಿಯಲ್ಲಿರುವ ಕರ್ನಾಟಕ ಭವನ ಕುರಿತು

97(574) ಶ್ರೀ ಪಿ.ಸಿ. ಸಿದ್ದನಗೌಡರ್ (ಕಲಘಟಗಿ)

ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

1) ದೆಹಲಿಯಲ್ಲಿರುವ ಹೊಸ ಮತ್ತು ಹಳೆಯ ಕರ್ನಾಟಕ ಭವನದಲ್ಲಿ ಎಷ್ಟು ಕೊಠಡಿಗಳಿವೆ;

2) ಇತ್ತೀಚಿನ ದಿನಗಳಲ್ಲಿ ಇಲ್ಲಿರುವ ಕೊಠಡಿಗಳೆಲ್ಲಾ ಭರ್ತಿಯಾಗಿರುವುದರಿಂದ ಈ ಎರಡು ಕಡೆಗಳಲ್ಲಿ ಸರ್ಕಾರವು ಕಟ್ಟಡವನ್ನು ವಿಸ್ತರಣೆ ಮಾಡಿ ಕೊಠಡಿಗಳ ಸಂಖ್ಯೆಯನ್ನು ಹೆಚ್ಚಿಸಲು ಕ್ರಮ ಕೈಗೊಳ್ಳುವುದೇ;

3) ದೆಹಲಿಯಲ್ಲಿರುವ ಹೊಸ ಮತ್ತು ಹಳೆಯ ಕರ್ನಾಟಕ ಭವನದಲ್ಲಿ ಕೆಲಸ ಮಾಡುತ್ತಿರುವ ನೌಕರರ ಮತ್ತು ಅಧಿಕಾರಿಗಳ ಸಂಖ್ಯೆ ಎಷ್ಟು; (ದರ್ಜೆವಾರು ವಿವರ ನೀಡುವುದು)

4) ಇವರುಗಳಲ್ಲಿ ಎಷ್ಟು ಜನ ತಾತ್ಕಾಲಿಕವಾಗಿ ಹಾಗೂ ಖಾಯಂ ಆಗಿ ಎಷ್ಟು ದಿನಗಳಿಂದ ಕೆಲಸ